# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
# Bruhat Bengaluru Mahanagara Palike

ಸಂಖ್ಯೆ:ವಿ.ಆ(ಆ)/ಪಿ.ಆರ್(02)/101/2021-22

ವಿಶೇಷ ಆಯುಕ್ತರು (ಆರೋಗ್ಯ) ರವರ ಕಛೇರಿ
ಕೇಂದ್ರ ಕಛೇರಿ ಆವರಣ, ನ.ರಾ.ಚೌಕ್,
ಬೆಂಗಳೂರು-560002. ದಿನಾಂಕ: 20/04/2021

## :ಕಛೇರಿ ಆದೇಶ:

ವಿಷಯ: ಕೋವಿಡ್-19 ನಿರ್ವಹಣೆಗೆ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕೋವಿಡ್-19 ಸೋಂಕು ಪ್ರಕರಣಗಳು ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಕ್ಷೇತ್ರ ಮಟ್ಟದ ಸಿಬ್ಬಂದಿಗಳಿಗೆ ಸುರಕ್ಷತಾ ಉಪಕರಣಗಳನ್ನು ಖರೀದಿಸುವ ಸಂಬಂಧ ಮಾನ್ಯ ಮುಖ್ಯ ಆಯುಕ್ತರವರ ಆದೇಶದ ಮೇರೆಗೆ ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ತಲಾ ರೂ2.00ಲಕ್ಷಗಳನ್ನು ಪಾಲಿಕೆಯ 141 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಹಂಚಿಕೆ ಮಾಡಲಾಗಿರುತ್ತದೆ. ಸದರಿ ಅನುದಾನದ ಬಳಕೆಯ ಕುರಿತಂತೆ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿಗಳು ಕೆಳಕಂಡ ಮಾರ್ಗದರ್ಶಿ ಸೂತ್ರಗಳನ್ನು ಕಡ್ಡಾಯವಾಗಿ ಪಾಲಿಸಲು ಸೂಚಿಸಲಾಗಿದೆ.

1) ಸದರಿ ಅನುದಾನವನ್ನು ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯಲ್ಲಿ ಕೋವಿಡ್-19 ಸೋಂಕು ನಿಯಂತ್ರಣ ಕಾರ್ಯಗಳಿಗೆ ಮಾತ್ರ ಬಳಸತಕ್ಕದ್ದು.
2) ಸದರಿ ಅನುದಾನದಲ್ಲಿ ಪಿ.ಪಿ.ಇ. ಕಿಟ್, ಎನ್-95 ಮಾಸ್ಕ್, ಟ್ರಿಪಲ್ ಲೇಯರ್ ಸರ್ಜಿಕಲ್ ಮಾಸ್ಕ್, ಸ್ಯಾನಿಟೈಸರ್ ಮತ್ತು ಯು.ಟಿ.ಎಂ. ಆರ್.ಎ.ಟಿ. ಕಿಟ್‌ಗಳನ್ನು ಮಾತ್ರ ಖರೀದಿಸುವುದು.
3) ಸದರಿ ಅನುದಾನವನ್ನು ಲಸಿಕಾಕರಣ ಕಾರ್ಯಕ್ರಮಕ್ಕೆ ಫಲಾನುಭವಿಗಳನ್ನು ವಾಹನದಲ್ಲಿ ಕರೆತರಲು ಮತ್ತು ಲಸಿಕೆ ಬಗ್ಗೆ ಅರಿವು ಮೂಡಿಸಲು ಧ್ವನಿವರ್ಧಕ, ಆಟೋ ಹಾಗೂ ಕರಪತ್ರ ಮುದ್ರಿಸಲು ಬಳಸ ಬಹುದಾಗಿರುತ್ತದೆ.
4) ಸುರಕ್ಷತಾ ಉಪಕರಣಾ ಕೇಂದ್ರಗಳನ್ನು ಖರೀದಿಸುವಾಗ ಪ್ರಾಥಮಿಕ ಆರೋಗ್ಯ ಕೇಂದ್ರದ ಆರೋಗ್ಯ ರಕ್ಷಾ ಸಮಿತಿಯ ಸಭೆಯಲ್ಲಿ ಅನುಮೋದನೆ ಪಡೆಯಲು ಆಡಳಿತ ವೈದ್ಯಾಧಿಕಾರಿಗಳು ಕ್ರಮವಹಿಸುವುದು.
5) ಸದರಿ ಅನುದಾನದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಟೆಸ್ಟಿಂಗ್ ಮತ್ತು ವ್ಯಾಕ್ಸಿನೇಷನ್ ಚಟುವಟಿಕೆಗೆಳಗಾಗಿ ಮೂಲಭೂತ ಸೌಕರ್ಯ ಅಂದರೆ ಪೀಠೋಪಕರಣ ವ್ಯವಸ್ಥೆ ಮಾಡಲು ಸಹ ಬಳಸಬಹುದಾಗಿರುತ್ತದೆ.
6) ಸುರಕ್ಷತಾ ಉಪಕರಣಗಳನ್ನು ಕೆ.ಟಿ.ಪಿ.ಪಿ. ಕಾಯ್ದೆ-2000ರ ನಿಯಮಗಳನ್ವಯ ಖರೀದಿಸುವುದು.
7) ಖರೀದಿಸಿದ ಸುರಕ್ಷತಾ ಉಪಕರಣಗಳನ್ನು ದಾಸ್ತಾನು ಪುಸ್ತಕಕ್ಕೆ ಕಡ್ಡಾಯವಾಗಿ ದಾಖಲಿಸುವುದು.

8) ಕರ್ನಾಟಕ ಡ್ರಗ್ಸ್ & ಲಾಜಿಸ್ಟಿಕ್ ವೇರ್ ಹೌಸ್ ವತಿಯಿಂದ (ಸುರಕ್ಷತಾ ಉಪಕರಣ) ಸರಬರಾಜು ಇದ್ದಾಗ ಹೆಚ್ಚುವರಿಯಾಗಿ ಖರೀದಿಸಬಾರದು.
9) ಸುರಕ್ಷತಾ ಉಪಕರಣಗಳನ್ನು ಖರೀದಿಸುವಾಗ ಯಾವುದೇ ಕಾರಣಕ್ಕೂ ಕೆ.ಡಿ.ಎಲ್.ಡಬ್ಲ್ಯೂಎಸ್. ದರಗಳಿಗಿಂತ ಹೆಚ್ಚಿಗೆ ಇರದಂತೆ ಗಮನವಹಿಸುವುದು. ಈ ಮಾಹಿತಿಯನ್ನು ಕಾಲಕಾಲಕ್ಕೆ ಕೇಂದ್ರ ಕಛೇರಿಯಿಂದ ನೀಡುವುದು.
10) ಸುರಕ್ಷತಾ ಉಪಕರಣಗಳನ್ನು ಕ್ಷೇತ್ರಮಟ್ಟದ ಸಿಬ್ಬಂದಿಗೆ ವಿತರಿಸುವಾಗ, ನೀಡುತ್ತಿರುವ ಸಂಖ್ಯೆ ಮತ್ತು ಬಳಸುವ ಉದ್ದೇಶವನ್ನು ಸ್ಪಷ್ಟವಾಗಿ ದಾಸ್ತಾನು ಪುಸ್ತಕದಲ್ಲಿ ನಮೂದಿಸುವುದು.
11) ಸದರಿ ಅನುದಾನ ಬಳಕೆ ಪ್ರಮಾಣ ಪತ್ರವನ್ನು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿರವರು ನೀಡುವುದು.
12) ಕೋವಿಡ್–19 ನಿಯಂತ್ರಣ ಚಟುವಟಿಕೆಗಳಿಗೆ ಅನುದಾನ ಖರ್ಚು ಮಾಡುವ ಪ್ರಕ್ರಿಯೆಯು ಕಡ್ಡಾಯವಾಗಿ ಆರೋಗ್ಯ ವೈದ್ಯಾಧಿಕಾರಿಗಳ ಮೇಲ್ವಿಚಾರಣೆಯಲ್ಲಿಯೇ ನಡೆಯುವುದು.

**ಮಾನ್ಯ ಮುಖ್ಯ ಆಯುಕ್ತರವರ ಆದೇಶದ ಮೇರೆಗೆ)**

ವಿಶೇಷ ಆಯುಕ್ತರು (ಆರೋಗ್ಯ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:-**

1) ಮಾನ್ಯ ಆಡಳಿತಗಾರರ ಅವಗಾಹನೆಗೆ ತರಲು ಮಾನ್ಯರ ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
2) ಮಾನ್ಯ ಮುಖ್ಯ ಆಯುಕ್ತರವರ ಅವಗಾಹನೆಗೆ ತರಲು ಮಾನ್ಯರ ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
3) ಎಲ್ಲಾ ವಲಯ ಆಯುಕ್ತರುಗಳಿಗೆ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ ರವಾನಿಸಿದೆ.
4) ವಿಶೇಷ ಆಯುಕ್ತರು (ಹಣಕಾಸು)ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
5) ಎಲ್ಲಾ ವಲಯದ ಜಂಟಿ ಆಯುಕ್ತರುಗಳಿಗೆ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ ರವಾನಿಸಿದೆ.
6) ಮುಖ್ಯ ಲೆಕ್ಕಾಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
7) ಮುಖ್ಯ ಆರೋಗ್ಯಾಧಿಕಾರಿ (ಸಾ.ಆ)ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
8) ಎಲ್ಲಾ ವಲಯದ ಆರೋಗ್ಯಾಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
9) ಎಲ್ಲಾ ವಿಭಾಗದ ಆರೋಗ್ಯ ವೈದ್ಯಾಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
10) ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.